ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ (ಪ್ರಾದೇಶಿಕ), ಚಾಮರಾಜನಗರ

ಅಧಿಸೂಚನೆ ಸಂಖ್ಯೆ: ಎ2/ಸಿಬ್ಬಂದಿ/ಅ.ವೀ.ನೇ/ಸಿಆರ್-17/2017-18 ದಿನಾಂಕ: 21.05.2018.

## ಪ್ರಕಟಣೆ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ವೀಕ್ಷಕರ ನೇರ ನೇಮಕಾತಿಗೆ ಸಂಬಂಧಿಸಿದಂತೆ, ಚಾಮರಾಜನಗರ ವೃತ್ತದ ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರಕ್ಕೆ-22, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲಕ್ಕೆ-11 ಮತ್ತು ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರಕ್ಕೆ-16 ಮೂರು ವಿಭಾಗಗಳಿಗೆ ಸೇರಿಸಿ ಒಟ್ಟು 49 ಹುದ್ದೆಗಳು ಹಂಚಿಕೆಯಾಗಿದ್ದು, ಸದರಿ 49 ಹುದ್ದೆಗಳಿಗೆ ದಿನಾಂಕ:29.11.2018 ರಂದು ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ದಿನಾಂಕ:05.12.2018 ರಿಂದ 07.12.2018ರವರೆಗೆ ವೈದ್ಯಕೀಯ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಿದ್ದು, ವೈದ್ಯಕೀಯ ಪರೀಕ್ಷೆಯ ಫಲಿತಾಂಶ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಯ ಸಾರಾಂಶದ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಅಂತಿಮ ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಿ, ಪ್ರಥಮ ಹಂತದಲ್ಲಿ 41 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ಇನ್ನುಳಿದ 08 ಹುದ್ದೆಗಳಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರಕ್ಕೆ 01 ಹುದ್ದೆ (GM-EX SERVICEMAN), ಕಾವೇರಿ ವನ್ಯಜೀವಿ ವಿಭಾಗಕ್ಕೆ ಬುಡಕಟ್ಟು ಜನಾಂಗದ (STDT)-03 ಹುದ್ದೆ, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರಕ್ಕೆ ಬುಡಕಟ್ಟು ಜನಾಂಗದ (STDT) -04 ಹುದ್ದೆಗಳನ್ನು ತುಂಬಬೇಕಾಗಿದ್ದು, ಸದರಿ ಹುದ್ದೆಗಳನ್ನು ತಾತ್ಕಾಲಿಕ ಕಾಯುವಿಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಬೇಕಾಗಿರುತ್ತದೆ. ತಾತ್ಕಾಲಿಕ ಕಾಯುವಿಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ವಿವರಗಳನ್ನು ಪರಿಶೀಲಿಸಲಾಗಿ, ಸದರಿ ಪಟ್ಟಿಯಲ್ಲಿ ಬುಡಕಟ್ಟು ಜನಾಂಗದ (ST-Dwelling Tribe) ವರ್ಗಕ್ಕೆ ಸೇರಿದ ಒಟ್ಟು **8** ಅಭ್ಯರ್ಥಿಗಳು ಗುಂಡ್ಲುಪೇಟೆ, ಹೆಚ್.ಡಿ.ಕೋಟೆ ಮತ್ತು ಹುಣಸೂರು ತಾಲ್ಲೂಕುಗಳ ವಾಸಿಗಳು ಆಗಿದ್ದು, ಈ ಮೂರು ತಾಲ್ಲೂಕುಗಳು ಪೂರ್ಣ ಅಥವಾ ಭಾಗಶಹವೂ ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಹಾಗೂ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗಗಳಿಗೆ ಸೇರಿರುವುದಿಲ್ಲ. ಆದುದರಿಂದ ಇವರುಗಳು ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಹಾಗೂ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗಗಳಲ್ಲಿ ST-Dwelling Tribe ವರ್ಗದಲ್ಲಿ ಮೀಸಲಾಗಿರುವ ಖಾಲಿ ಉಳಿದ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವಿಭಾಗಕ್ಕೆ ಮೀಸಲಾಗಿರುವ ಬುಡಕಟ್ಟು ಜನಾಂಗದ (STDT)-12 ಹುದ್ದೆಗಳು ಈಗಾಗಲೇ ಭರ್ತಿಯಾಗಿರುತ್ತವೆ. ಆದುದರಿಂದ ತಾತ್ಕಾಲಿಕ ಕಾಯುವಿಕೆ ಪಟ್ಟಿಯಲ್ಲಿರುವ ಬುಡಕಟ್ಟು ಜನಾಂಗದ (STDT) ಅಭ್ಯರ್ಥಿಗಳನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. ಆದುದರಿಂದ ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲದ-03 ಹಾಗೂ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗದ-04 ಒಟ್ಟು **07** ಬುಡಕಟ್ಟು ಜನಾಂಗದ ST-Dwelling Tribe ವರ್ಗದ ಮೀಸಲಾತಿ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ವಿಭಾಗಕ್ಕೆ 01 ಹುದ್ದೆ (GM-EX SERVICEMAN) ವರ್ಗಕ್ಕೆ ಶ್ರೀ ರಮೇಶ್ ಹಡಿಮನಿ ಇವರು ಆಯ್ಕೆಯಾಗಿದ್ದು, ಆದರೆ ಸದರಿಯವರು ವೈದ್ಯಕೀಯ ಪರೀಕ್ಷೆಯಲ್ಲಿ UNFIT ಆಗಿರುವುದರಿಂದ, ಇವರು ಆಯ್ಕೆಯಾಗಿ ಅನರ್ಹರಾಗಿರುತ್ತಾರೆ. ಆದುದರಿಂದ ತಾತ್ಕಾಲಿಕ ಕಾಯುವಿಕೆ ಪಟ್ಟಿಯಲ್ಲಿರುವ ಅದೇ ವರ್ಗದ **ಶ್ರೀ ಹನುಮಪ್ಪ (ರಿಜಿಸ್ಟರ್ ನಂ.110846)** ಇವರ ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ ಇತರೆ ಎಲ್ಲಾ ಮೂಲ ದಾಖಲೆಗಳ ಪರಿಶೀಲನೆ ಹಾಗೂ ಈ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಮತ್ತು ನಿಗಧಿತ ವೈದ್ಯಕೀಯ ಪರೀಕ್ಷೆಗೆ **ದಿನಾಂಕ:21.12.2018 ಶುಕ್ರವಾರದಂದು ಪೂರ್ವಾಹ್ನ 10.30 ಗಂಟೆಗೆ** ಈ ಕೆಳಸಹಿದಾರರ ಸಮ್ಮುಖ ಹಾಜರಾಗಲು ತಿಳಿಸಿದೆ.

ಸದರಿ ಅಭ್ಯರ್ಥಿಯು ದಿನಾಂಕ:21.12.2018 ರಂದು ಖುದ್ದಾಗಿ ಹಾಜರಾಗುವಾಗ ಎಲ್ಲಾ ಮೂಲ ದಾಖಲಾತಿಗಳೊಂದಿಗೆ, ಇತ್ತೀಚಿನ 03 ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು. ಮೂಲ ದಾಖಲೆಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆ ಒಂದು ದಿನಕ್ಕಿಂತ ಹೆಚ್ಚು ದಿನಗಳು ನಡೆಯುವ ಸಂಭವವಿರುವುದರಿಂದ ಎಲ್ಲಾ ಪೂರ್ವ ಸಿದ್ದತೆಗಳನ್ನು ಸದರಿ ಅಭ್ಯರ್ಥಿಯು ಮಾಡಿಕೊಳ್ಳಲು ತಿಳಿಸಿದೆ.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ www.aranya.gov.in ನಲ್ಲಿ ಪ್ರಕಟಿಸಲಾಗಿದೆ.

ಸ್ಥಳ : ಚಾಮರಾಜನಗರ

ದಿನಾಂಕ: 18-12-2018.

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
ಹಾಗೂ ಆಯ್ಕೆ ಪ್ರಾಧಿಕಾರಿ,
ಚಾಮರಾಜನಗರ ವೃತ್ತ, ಚಾಮರಾಜನಗರ.